◆ ಹೌದು, ಹೆಣ್ಣು ತನ್ನ ವಿಸ್ಮೃತಿ ಕಳಚಿಕೊಂಡು ಕಾಲದಾಚೆ ಹೆಜ್ಜೆ ಹಾಕುತ್ತಿದ್ದಾಳೆ. ಆದರೆ ಪುರುಷ ಮನಃಸ್ಥಿತಿ ಹಾಗೆಯೇ ಇದೆ. ಇದರಿಂದ ಒಂದು ಅಸಮತೋಲನ ಉಂಟಾಗುತ್ತಿದೆಯೆನಿಸುತ್ತದೆ. ಅದರಿಂದಲೇ ಹಿಂಸೆಗಳು ಉಂಟಾಗುತ್ತಿವೆ. ಸಾಮರಸ್ಯದ ಹದ ತಪ್ಪುತ್ತಿದೆ. ಹೆಚ್ಚು ವಿಘಟನೆಗಳಾಗುತ್ತಿವೆ. ಅದಕ್ಕೆ ಜಾಗೃತಿ ಹಾಗೂ ಜಡತೆಯ ವೈರುಧ್ಯಗಳೇ ಕಾರಣವೇನೋ. ಮದುವೆ, ಮಕ್ಕಳು ಇದರಾಚೆಯೂ ಅವಳ ವ್ಯಕ್ತಿತ್ವವೊಂದು ಅರಳುವುದನ್ನು ಒಪ್ಪಿಕೊಳ್ಳುವ ಮನಃಸ್ಥಿತಿ ಕುಟುಂಬದಲ್ಲೂ, ಸಮಾಜದಲ್ಲೂ ನಿರ್ಮಾಣವಾಗುವುದು ಸುಲಭವಲ್ಲವೇನೋ...

ಹೆಣ್ಣಿನ ಕುರಿತ ಸಾಂಪ್ರದಾಯಿಕ ದೃಷ್ಟಿಕೋನ ಸಮಾಜದ ಬೌದ್ಧಿಕತೆಯಲ್ಲಿ ಇನ್ನೂ ಹಾಗೇ ಉಳಿದಿರುವುದು ಹೌದು. ಸಾನಿಯಾ ಮಿರ್ಜಾಳನ್ನ ಇಂಟರ್‌ವ್ಯೂ ಮಾಡ್ತಾ ಒಂದುಕಡೆ ರಾಜದೀಪ್ ಸರ್‌ದೇಸಾಯಿ ಕೇಳ್ತಾರೆ: ನಿಮ್ಮ ಲೈಫ್ ಪರಿಪೂರ್ಣವಾಗುವುದು ಯಾವಾಗ? ಆಕೆಯ ಮದುವೆಯೂ ಆಗಿತ್ತು ಆವಾಗ. ಕೆರಿಯರ್ ಅದು ಇದೂ ಅಂತೆಲ್ಲ ಪ್ರಶ್ನಿಸ್ತಾ ತುಂಬಾ ನಾರ್ಮಲ್ ಎಂಬಂತೆ ಈ ಪ್ರಶ್ನೆ ಕೇಳ್ತಾರೆ. ಆವಾಗ ಆಕೆ ಸಿಟ್ಟಿಗೆದ್ದು ಬಯ್ತಾಳೆ. ನಾನು ಇಷ್ಟೆಲ್ಲ ಚಾಂಪಿಯನ್‌ಶಿಪ್ ಗೆದ್ದಿದೀನಿ. ಅವಾರ್ಡ್ ತಗೊಂಡಿದೀನಿ. ನಮ್ಮ ದೇಶದ ಸಲುವಾಗಿ ಆಡ್ತಾ ಇದೀನಿ, ಅಷ್ಟು ಸಾಕಾಗುವುದಿಲ್ಲವೇನು? ನನಗೊಂದು ಮಗುವಾದರೇನೇ ಬದುಕು ಕಂಪ್ಲೀಟ್ ಆದ ಹಾಗಾ? ಹೀಗೇಕೆ ಭಾವಿಸುತ್ತೀರಿ? ನಿಮ್ಮಂಥವರೇ ಹೀಗೆ ತಿಳಕೊಂಡ್ರೇ ಇನ್ನು ಸಾಮಾನ್ಯ ಮಂದಿ ಹೇಗೆ ತಿಳ್ಕೋಬೇಕು? ಅಂದ್ರೆ ಮದುವೆ, ಮಕ್ಕಳು ಎಲ್ಲವನ್ನೂ ನಿರಾಕರಿಸಬೇಕು ಅಂತಲ್ಲ, ಅದಾಗದಿದ್ರೆ ಅವಳ ಜೀವನವೇ ವ್ಯರ್ಥ, ಅಪೂರ್ಣವೆಂದು ಭಾವಿಸುವುದು ತಪ್ಪು. ಮಹಿಳೆಯೊಬ್ಬಳು ಸ್ವತಂತ್ರವಾಗಿದ್ದರೂ ಸುಖವಾಗಿ ಯಾಕಿರುವುದಿಲ್ಲವೆಂದರೆ, ಅವಳ ತಲೆಯಲ್ಲಿ ಮೊದಲಿನಿಂದಲೂ ಲೈಫ್ ಕಂಪ್ಲೀಟ್ ಆಗೋದು ಮದುವೆ, ಮಕ್ಕಳಿಂದಾನೇ ಅನ್ನೋದು ಬಿತ್ತನೆ ಆಗಿರುತ್ತದೆ. ಆದರೆ, ಬದುಕಿನ ಪೂರ್ಣತೆ ನಮ್ಮೊಳಗೇ ಇರ್ತದೆ.



◆ ತಾಯ್ತನ ಅನ್ನೋದು ಹೆಣ್ಣಿನ ಬೇಸಿಕ್ ಇನ್‌ಸ್ಟಿಂಕ್ಟ್ ಎನ್ನುವ ಭಾವನೆ ಅನೇಕರಲ್ಲಿದೆ. ಕೌಟುಂಬಿಕ ಚೌಕಟ್ಟಿನಾಚೆಗೆ ಪ್ರಾಕೃತಿಕವಾಗಿಯೇ ಅದು ಸಹಜವೆಂಬ ಆಲೋಚನೆಯದು. ಹೆಣ್ಣಿನ ಜೈವಿಕ ವಿನ್ಯಾಸವೂ ಅದನ್ನು ಸಮರ್ಥಿಸುತ್ತದೆ. ಅವಳ ಗರ್ಭಕೋಶ, ಹಾಲೂಡಿಸುವ ಮೊಲೆಗಳು... ಅವಳ ಅಪ್ಪಟ ಜೈವಿಕತೆ ಹಾಗೂ ಬೌದ್ಧಿಕ ಸೆಳೆತಗಳನ್ನು ಸರಿದೂಗಿಸೋದು ಹೇಗೆ? ಹೇಗೆ ತಗೋಬೇಕು ಇದನ್ನ?

ಮಗು ಬೇಕೆನ್ನುವುದು ಅವಳ ನ್ಯಾಚುರಲ್ ಇನ್‌ಸ್ಟಿಂಕ್ಟ್ ಇರಬಹುದು. ಆದರೆ ಆ ಬಯಕೆ ಯಾರಿಗಾದ್ರೂ ಇಲ್ಲ ಅಂದ್ರೆ ಅವಳು ಹೆಣ್ಣಲ್ಲ ಅಂತಲ್ಲ. ಅದು ಅವಳ ದೌರ್ಬಲ್ಯವೂ ಅಲ್ಲ. ಇದನ್ನು ಸ್ವೀಕರಿಸುವಲ್ಲಿ ಪ್ರತಿ ಹೆಣ್ಣೂ ಭಿನ್ನ ಹಾಗೂ ಸ್ವತಂತ್ರಳು.

◆ ಸ್ತ್ರೀ ಮುಕ್ತಿಯ ಕುರಿತು ಮಾತನಾಡುವಾಗಲೆಲ್ಲ ಅವಳ ಜವಾಬ್ದಾರಿಯ ಪ್ರಶ್ನೆ ಎದುರಾಗುತ್ತದೆ. ಅವಳು ತನ್ನೊಳಗಿನ ಪೂರ್ಣತೆಯನ್ನರಸಿ ಗಂಡಸಿನಂತೆ ಹೊರಟುಬಿಡೋಕಾಗೋದಿಲ್ಲ. ಮಗುವನ್ನು ಹೆತ್ತಮೇಲೆ ಅದನ್ನು ಪೋಷಿಸುವುದು ಅವಳ ಜವಾಬ್ದಾರಿ. ಇದನ್ನು ಸಮಾಜ ವಿಧಿಸಿದ್ದೋ ಅಥವಾ ಅದು ಜೈವಿಕ